ಶ್ರೀ ಎನ್. ಹುಚ್ಚಮಾಸ್ತಿಗೌಡ .—ಈಗ ನಡೆಯುತ್ತಿರುವ ಕೆಲಸಗಳು ನಡೆಯುತ್ತಿರುತ್ತವೆ. ಅವುಗಳನ್ನು ನಿಲ್ಲಿಸುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ .—ಯಾವ ಯಾವ ಕಾರ್ಯಕ್ರಮಗಳ ಕೆಳಗೆ ಎಷ್ಟೆಷ್ಟು ಜನರು ಕೆಲಸ ಮಾಡುತ್ತಿದ್ದಾರೆಂಬುದನ್ನು ಹೇಳುತ್ತೀರಾ ?

ಶ್ರೀ ಎನ್ ಹುಚ್ಚಮಾಸ್ತಿಗೌಡ .—ಕ್ಯಾಷ್ ಪ್ರೋಗ್ರಾಮ್‌ನಲ್ಲಿ ೧೨೦೦ ಜನರು, ಲ್ಯಾಂಡ್ ಆರ್ಮಿಯಲ್ಲಿ ೩೨೫ ಜನರು, ಡಿ.ಪಿ.ಎ.ಪಿ.ನಲ್ಲಿ ೨೫೦೦ ಜನರು, ಸಾಯಿಲ್ ಕನ್‌ಸರ್‌ವೇಷನ್‌ನಲ್ಲಿ ೬೨೦೦ ಜನರು ಪಿ.ಡಬ್ಲ್ಯೂ.ಡಿ. ಮತ್ತು ಇತರೇ ಕೆಲಸಗಳಲ್ಲಿ ೩೨೦೦ ಜನರು ಕೆಲಸ ಮಾಡುತ್ತಿದ್ದಾರೆ. ಒಟ್ಟು ೧೩,೪೨೫ ಜನರು ಕೆಲಸ ಮಾಡುತ್ತಿದ್ದಾರೆ.

ಶ್ರೀ ಆಂದಾನಯ್ಯ .—ತುಂಬಕೂರು ಜಿಲ್ಲೆಯಲ್ಲಿ ಕಾಮಗಾರಿ ಕೆಲಸಗಳ ಅವಶ್ಯಕತೆ ಇಲ್ಲ ಎಂದು ಹೇಳಿದಿರಿ. ಕುಣಿಗಲ್ ತಾಲ್ಲೂಕ್‌ನ ಯಡಿಯೂರು, ಅಮೃತೂರು ಮುಂತಾದ ಕಡೆಗಳಲ್ಲಿ ಮತ್ತು ತಮ್ಮ ಕ್ಷೇತ್ರದ ಕೆಲವು ಭಾಗಗಳಲ್ಲಿ ಮಳೆ ಬಾರದೆ, ಖುಷ್ಕಿ ಬೆಳೆಯೆಲ್ಲಾ ಹೋಗಿ ರೈತರಿಗೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ? ಇಂತಹ ಕಡೆಗಳಲ್ಲಿಯಾದರೂ ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಕೊಳ್ಳುವಂತೆ ಸ್ಥಳದ ಅಧಿಕಾರಿಗಳಿಗೆ ಆದೇಶ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ .—ನನ್ನ ಕ್ಷೇತ್ರದ ಕೆಲವು ಭಾಗಗಳಲ್ಲಿ ತೊಂದರೆಯಾಗಿರುವುದು ಸ ಪ್ಪವಾಗಿ ಗೊತ್ತಿದ್ದರೂ ಸಹ ಹಣದ ಮಿತಿ ಮತ್ತು ಇತರ ಕೆಲವು ಕಾರಣಗಳಿಂದ ಹಣ ಕೊಡುವುದನ್ನು ನಿಲ್ಲಿಸಬೇಕಾಯಿತು. ಮತ್ತೆ ಹಣ ಬಂದ ಕೂಡಲೆ ಯಾವ ಯಾವ ಭಾಗಗಳಲ್ಲಿ ಕೆಲಸ ತೆಗದುಕೊಳ್ಳಬೇಕೆಂಬುದನ್ನು ಆಲೋಚನೆ ಮಾಡಿ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ.

## DESILTING OF TANKS IN THE STATE

254. SRI ANDANAIAH (Kunigal) .—Will the Minister for Public Works and Electricity be pleased to state :—

(*a*) whether the Government is aware that 90 per cent of the Irrigation tanks in the State have been completely silted up with sand;

(*b*) whether the Goverament has received any petitions from the public all over the State for desilting of tanks ; if so, the action taken by the Government ?

SRI H. M. CHANNABASAPPA (Minister for Public Works and Electricity) .

(*a*) No.

(*b*) Petitions are being received from the Public for desilting of tanks Desilting Tanks is not being done since the same is found to be prohibitively costly and uneconomical.

ಶ್ರೀ ಆಂದಾನಯ್ಯ .—ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಗೊತ್ತಿಲ್ಲ ಎಂದು ಹೇಳಿದ್ದೀರಿ. ಅಂದರೆ ತಮ್ಮ ಅಭಿಪ್ರಾಯದಲ್ಲಿ ಯಾವ ಒಂದು ಕೆರೆಯೂ ಸಹ ಮರಳಿನಿಂದ ಮುಚ್ಚಿಹೋಗಿಲ್ಲ ಎಂದು ಅರ್ಥವೇ ?

† ಶ್ರೀ ಎಚ್. ಎಂ. ಚೆನ್ನಬಸಪ್ಪ .—ರಾಜ್ಯದಲ್ಲಿನ ಶೇಕಡ ೯೦ರಷ್ಟು ನೀರಾವರಿ ಕೆರೆಗಳು ಮರಳಿನಿಂದ ಮುಚ್ಚಿಹೋಗಿರುವುದು ಸರ್ಕಾರದವರಿಗೆ ಗೊತ್ತಿದೆಯೇ ಎಂದು ಕೇಳಿದ್ದಕ್ಕೆ ಆ ರೀತಿ ಉತ್ತರ ಕೊಡಲಾಗಿದೆ.

ಶ್ರೀ ಆಂದಾನಯ್ಯ .—ಎಷ್ಟು ಪರ್ಸೆಂಟ್ ಕೆರೆಗಳು ಮರಳಿನಿಂದ ಮುಚ್ಚಿಹೋಗಿವೆ ಎಂದು ಹೇಳುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ .—ಪರ್ಸೆಂಟೇಜ್ ವರ್ಕ್ ಔಟ್ ಮಾಡಿಲ್ಲ.

ಶ್ರೀ ಅಂದಾನಯ್ಯ .—ಎರಡನೇ ಪ್ರಶ್ನೆಗೆ ಉತ್ತರ ಕೊಡುತ್ತಾ ಕೆಲಸವು ದುಬಾರಿಯಾಗಿದ್ದು ಲಾಭದಾಯಕವಲ್ಲವೆಂದು ಕಂಡುಬಂದಿದ್ದರಿಂದ ಅದನ್ನು ಕೈಕೊಳ್ಳಲಾಗುತ್ತಿಲ್ಲವೆಂದು ಹೇಳಿದ್ದೀರಿ. ಇದೇ ರೀತಿ ಬಿಟ್ಟುಬಿಟ್ಟರೆ ಇನ್ನು ಎರಡು ಮೂರು ವರ್ಷಗಳಲ್ಲಿ ಎಲ್ಲ ಕೆರೆಗಳು ಮರಳಿನಿಂದ ತುಂಬಿಹೋಗುತ್ತವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ .—ಕೆಲವು ಕಡೆ ಆ ರೀತಿಯಾಗುತ್ತದೆ. ಮತ್ತೆ ಕೆಲವು ಕಡೆ ಆ ರೀತಿ ಆಗುವುದಿಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ .—ಮಲೆನಾಡಿನಲ್ಲಿ ಪ್ರತಿ ವರ್ಷವೂ ಮಳೆಗಾಲದಲ್ಲಿ ಕೆರೆಗಳಿಗೆ ಮಣ್ಣು ಮತ್ತು ತರಗೆಲೆ ಬಂದು ಸೇರುತ್ತಿರುವುದರಿಂದ ಕೆರೆಗಳು ಮುಚ್ಚಿಹೋಗುತ್ತಿವೆ. ಈ ಹೂಳನ್ನು ತಗೆಯದಿದ್ದರೆ ಕೆರೆಗಳಿಂದ ಯಾವ ಪ್ರಯೋಜನವೂ ಆಗದುವುದಿಲ್ಲ. ಮತ್ತು ನೀರೂ ಸಹ ಉತ್ಪತ್ತಿಯಾಗುವುದಿಲ್ಲ, ಈ ಕಾರಣದ್ದಿಂದ ಹೂಳನ್ನು ತೆಗೆಸುತ್ತೀರಾ ಅಥವಾ ತಮ್ಮ ನೀತಿಯ ಪ್ರಕಾರ ಕೇವಲ ತೂಬು ಕಟ್ಟುವುದು ಮತ್ತು ಬಂಡು ಕಟ್ಟುವುದನ್ನು ಮಾತ್ರ ಕೈಕೊಳ್ಳುತ್ತೀರಾ ಎಂಬುದನ್ನು ತಿಳಿಸಬೇಕು ?

ಶ್ರೀ ಎಚ್, ಎಂ. ಚೆನ್ನಬಸಪ್ಪ .— ಇದು ನ್ಯಾಚುರಲ್ ಫೆನಾಮಿನ. ನಾವು ಕೆರೆಗಳನ್ನು ಕಟ್ಟಿಸುವಾಗ ಸ್ಪಿಲ್ ಓವರ್ ಲೆವೆಲ್ ಕೆಳಗೆ ಅಂದರೆ ಹತ್ತರಿಂದ ಇಪ್ಪತ್ತು ಪರ್ಸೆಂಟ್ ಕೆಳಗೆ ಡೆಡ್ ವಾಟರ್ ನಿಲ್ಲುವುದಕ್ಕೆ ಅವಕಾಶ ಮಾಡಿರುತ್ತೇವೆ. ಮತ್ತು ಇರಿಗೇಷನ್‌ಗೆ ಅಫೆಕ್ಟ್ ಆಗದ ಹಾಗೆ ಮಾಡುತ್ತೇವೆ. ಕೆಲವು ಕಡೆಗಳಲ್ಲಿ ಹೂಳು ಸೇರುವುದು ಕಡಿಮೆ, ಮತ್ತೆ ಕೆಲವು ಕಡೆಗಳಲ್ಲಿ ಸ್ವಾಭಾವಿಕ ಕಾರಣಗಳಿಂದ ಕೆರೆಗಳಲ್ಲಿ ಹೂಳು ಸೇರುತ್ತದೆ. ಈ ಹೂಳನ್ನು ತೆಗೆಯುವುದರ ಮೂಲಕ ನೀರಿನ ಕೃಪಾಸಿಟಿಯನ್ನು ಒಂದೇ ಸಮನೆ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಮತ್ತು ಹೂಳನ್ನು ತೆಗೆಸುವುದರ ಮೂಲಕ ನೀರನ್ನು ಶೇಖರಿಸಿ ಒಂದು ಎಕರೆಗೆ ಉಪಯೋಗವಾಗುವಂತೆ ಮಾಡಿದರೂ ಸಹ ಅದಕ್ಕೆ ಹತ ರಿಂದ ಇಪ್ಪತ್ತು ಸಾವಿರ ರೂಪಾಯಿ ಖರ್ಚಾಗುತ್ತದೆ. ಇದಕ್ಕೆ ಬೇರೆ ಮಾರ್ಗವೆಂದರೆ, ಕೆರೆಗಳಲ್ಲಿ ನೀರು ಹೆಚ್ಚು ನಿಲ್ಲುವಂತೆ ಮಾಡುವುದು. ಅದಕ್ಕಾಗಿ ಕೋಡಿ ಮತ್ತು ಏರಿಯ ಕೃಪಾಸಿಟಿಯನ್ನು ಹೆಚ್ಚು ಮಾಡುವುದನ್ನು ಸರ್ಕಾರ ಆಗಾಗ ಮಾಡುತ್ತದೆ.

ಶ್ರೀ ಕೆ. ವಿಚ್. ಹನುಮೇಗೌಡ .—ಕೆರೆಗಳ ಮೇಲು ಭಾಗದಿಂದ ಮಳೆ ಬಂದಾಗ ತೊರೆ ಬಂದು ಕೆರೆಗಳಲ್ಲಿ ಮರಳು ತುಂಬಿಹೋಗುತ್ತದೆ. ಈ ರೀತಿಯಾಗದಂತೆ ಮಾಡಲು ಕೆರೆಗಳ ಮೇಲು ಭಾಗಗಳಲ್ಲಿ ಬಂಡೆಗಳನ್ನು ಕಟ್ಟಿಸಿ. ಅಲ್ಲಿ ನಿಲ್ಲುತಕ್ಕ ಮಣ್ಣನ್ನು ತೆಗೆಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚೆನ ಬಸಪ್ಪ .—ಕೆರೆಗಳಿಗೆ ಎಲ್ಲೆಲ್ಲಿಂದ ಹೂಳು ಬರುತ್ತದೆ ಅದನ್ನು ಬರದಂತೆ ತಡೆಗಟ್ಟುವುದು ಒಂದು ಮಾರ್ಗ, ಮತ್ತು ಕೆರೆಗಳ ಮೇಲ್ಭಾಗದಲ್ಲಿ ಮರಗಳನ್ನು ಬೆಳೆಸಿ ಹೂಳನ್ನು ತೆಗೆಯುವಂತೆ ಮಾಡುವುದು ಇನ್ನೊಂದು ಮಾರ್ಗವಿದೆ ಇದೇ ರೀತಿ ನಾನಾ ಮಾರ್ಗಗಳಿವೆ. ಕೋಲಾರ ಮತು ಬೆಂಗಳೂರು ಜಿಲ್ಲೆಗಳಲ್ಲಿ ಲೂಸ್ ಸಾಯಿಲ್ ಇರುವುದರಿಂದ, ಒಂದು ಸಲ ಮಳೆ ಬಂದುಬಿಟ್ಟರೆ ಮಣ್ಣು ಕೊಚ್ಚಿಕೊಂಡು ಕೆರೆಗಳಿಗೆ ಬಂದು ಸೇರಿಬಿಡುತ್ತದೆ. ಇಂತಹ ಕಡೆಗಳಲ್ಲಿ ಹೂಳನ್ನು ತೆಗೆಸುವುದು ಕಷ್ಟವಾಗುತ್ತದೆ. ಈ ರೀತಿ ಕೊಚಿ ಕೊಂಡು ಮಣ್ಣು ಬರದಂತೆ ಮಾಡಲು ಅಲ್ಲಲ್ಲೇ ಬಂಡೆಗಳನ್ನು ಕಟ್ಟಿಸುವುದು ಒಂದು ಮಾರ್ಗ.

ಶ್ರೀ ಎಂ. ನಂಜೇಗೌಡ .—ಹೂಳು ತೆಗೆಸುವುದು ಲಾಭದಾಯಕವಲ್ಲ ಎಂದು ಹೇಳಿದ್ದೀರಿ. ಈ ಕಾರಣದಿಂದ ಹೂಳು ತುಂಬಿರುವ ಜಮೀನನ್ನು ವ್ಯವಸಾಯಕ್ಕೆ ಕೊಡುವ ಯೋಚನೆ ಇದೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ .—ಅಂತಹ ಕೆರೆಗಳು ಅಪ್ರಯೋಜಕ, ಪ್ರಯೋಜನವಿಲ್ಲ ಎಂದು ಕಂಡುಬಂದಾಗ ಅದನ್ನು ಯೋಚನೆ ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ .—ಮಲೆನಾಡಿನ ಕೆರೆಗಳಲ್ಲಿ ನೀರು ಹೆಚು ಉತ್ಪತ್ತಿಯಾಗುತ ದೆ. ಇಂತಹ ಕಡೆಗಳಲ್ಲಿ ಹೂಳು ತುಂಬಿಕೊಂಡುಬಿಟ್ಟರೆ ಆ ನೀರನ್ನೇ ನಂಬಿರುವವರಿಗೆ ಕಷ್ಟವಾಗುತ ದೆ ಈ ಕಾರಣದಿಂದ ಎಲ್ಲಿ ನೀರು ಉತ್ಪತಿ ಯಾಗುತ ದೋ ಅಂತಹ ಕಡೆಗಳಲ್ಲಿಯಾದರೂ ಹೂಳನ್ನು ತೆಗೆಸುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ .—ಮಲೆನಾಡಿನ ಕೆರೆಗಳಲ್ಲಿ ಸ್ಪಿಲ್ಲಿಂಗ್ ಇವ. ಇಂತಹ ಕಡೆಗಳಲ್ಲಿ ಹೂಳು ಏನಾದರು ತುಂಬಿಕೊಂಡಿದ್ದರೆ ಅದನ್ನು ತೆಗೆಸಿ ವ್ಯವಸಾಯಕ್ಕೆ ನೀರಿನ ಅನುಕೂಲ ಸಿಗುವಂತೆ ವ್ಯವಸ್ಥೆ ಮಾಡಿಕೊಡುತ್ತೇವೆ.

ಶ್ರೀ ಅಂದಾನಯ್ಯ .—ಕೆರೆಗಳಲ್ಲಿ ಹೂಳು ತುಂಬಿಕೊಳ್ಳುವುದಕ್ಕೆ ಕಾರಣ, ಕೆರೆಗಳ ಮೇಲ್ಭಾಗದ ಜಮೀನಿನಲ್ಲಿ ಆನ್-ಆತ ರೈಸ್ಡ್ ಕಲ್ಟಿವೇಷನ್ ಮಾಡುವುದು ಒಂದು ಕಾರಣ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ .—ಕೆರೆಯ ಅಂಗಳದಲ್ಲಿರತಕ್ಕ ಭೂಮಿಯಲ್ಲಿ ಉಳುಮೆ ಮಾಡಿದಾಗ ಭೂಮಿ ಸಡಿಲವಾಗುತ್ತದೆ ಆಂಥಾ ಸಂದರ್ಭಗಳಲ್ಲಿ ಮಳೆ ಬಂದಾಗ ಮಣ್ಣೆಲ್ಲವೂ ಕೊಚ್ಚಿ ಕೊಂಡು ಕೆರೆಗೆ ಹೋಗಿ ಹೂಳು ತುಂಬುವುದು ಒಂದು ಕಾರಣ.

ಅಧ್ಯಕ್ಷರು :—ನಂ. ೨೬೮ನೆಯ ಪ್ರಶ್ನೆಯನ್ನು ಶ್ರೀ ಜಯಪ್ರಕಾಶ್ ನಾರಾಯಣ ಅವರು ಕೇಳಬಹುದು.

## EXTENSION OF SERVICE OF REVENUE DEPARTMENT OFFICIALS

268 M. H. JAYAPRAKASH NARAYAN. (Sirsi) On behalf of SRI G. PUTTASWAMY (Mudigere) : Will the Chief Minister be pleased to State—

(*a*) The name of the officers and officials who have been given extensions of service in Revenue Department during the last Three years ;

(*b*) of them, the number of officers and officials who belong to Scheduled Castes and Scheduled Tribes ?

SRI D. DEVARAJ URS (CHIEF MINISTER).—

(*a*) One Sri Mohd. Sadil, Peon, Taluk Office, Aurad.

(*b*) Nil.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ :—ಸ್ವಾಮಿ ಮೊನ್ನೆ ಮಹಾಚುನಾವಣೆ ಆಗುವುದಕ್ಕೆ ಮೊದಲು ನಮ್ಮ ರಾಜ್ಯದಲ್ಲಿ ರಾಷ್ಟ್ರಪತಿಗಳ ಆಳ್ವಿಕೆ ಇದ್ದಾಗ ರಾಜ್ಯಪಾಲರು ಅನೇಕ ರೆವಿನ್ಯೂ ಅಸಿಸ್ಟೆಂಟ್ ಕಮಿಷನರ್ ಮತ್ತು ಡೆಪ್ಯೂಟಿ ಕಮಿಷನರಿಗೆ ಪ್ರಮೋಷನ್ ಕೊಟ್ಟಿದ್ದಾರೆ, ಎಕ್ಟೆನ್ಷನ್ ಕೊಟ್ಟಿದ್ದಾರೆ, ಮತ್ತು ರೀ ಎಂಪ್ಲಾಯ್‌ಮೆಂಟ್ ಕೊಟ್ಟಿದ್ದಾರೆ. ಇದಕ್ಕೆ ಸರ್ಕಾರದವರು ಏನು ಉತ್ತರ ಹೇಳುತ್ತಾರೆ ? ಇದು ನಿಜವೇ ?

† ಶ್ರೀ ಡಿ. ದೇವರಾಜ್ ಅರಸ್ :—ಒಬ್ಬರಿಗೆ ಮಾತ್ರ ಎಕ್ಸ್‌ಟೆನ್‌ಷನ್ ಕೊಟ್ಟಿದೆ.

ಶ್ರೀ ಎಂ. ಎಚ್ ಜಯಪ್ರಕಾಶನಾರಾಯಣ —ಔರಂಗಾಬಾದ್ ತಾಲ್ಲೂಕು ಕಚೇರಿಯ ಜವಾನ ಶ್ರೀ ಮಹ್ಮದ್ ಸಾದಿಕ್ ಒಬ್ಬರನ್ನು ಬಿಟ್ಟು ಬೇರೆ ಯಾರಿಗೂ ಕೊಟ್ಟಿಲ್ಲ ಎಂದು ತಮ್ಮ ಅಭಿಪ್ರಾಯವೇ ?

ಶ್ರೀ ಡಿ. ದೇವರಾಜ್ ಅರಸ್ :—ಇದು ರೆವಿನ್ಯೂ ಡಿಪಾರ್ಟ್‌ಮೆಂಟ್ ಮಾತ್ರ.

ಶ್ರೀ ಎಂ ಎಸ್ ಜಯಪ್ರಕಾಶನಾರಾಯಣ್ :—ರೆವಿನ್ಯೂ ಇಲಾಖೆಯಲ್ಲಿ ಅಸಿಸ್ಟೆಂಟ್ ಕಮಿಷನರಿಗೆ ಡೆಪ್ಯೂಟಿ ಕಮಿಷನರಿಗೆ ಎಕ್ಸ್‌ಟೆನ್‌ಷನ್ ಕೊಟ್ಟಿದ್ದಾರೆ, ರೀ ಎಂಪ್ಲಾಯ್‌ಮೆಂಟ್ ಕೊಟ್ಟಿದ್ದಾರೆ. ಕಳೆದ ೩ ವರ್ಷಗಳಿಂದ ಇದು ನಡೆದಿದೆ. ಇದನ್ನು ಯಾವ ತತ್ವದ ಮೇಲೆ ಕೊಟ್ಟಿದ್ದೀರಿ ? ಹರಿಜನ ಗಿರಿಜನರಿಗೆ ಎಕ್ಸ್‌ಟೆನ್‌ಷನ್ ಮತ್ತು ರೀ ಎಂಪ್ಲಾಯ್‌ಮೆಂಟ್ ಅನ್ನು ನಿರಾಕರಿಸಿ ಕೆಲವರಿಗೆ ಮಾತ್ರ ಎಂಪ್ಲಾಯ್‌ಮೆಂಟ್ ಕೊಟ್ಟಿದ್ದಾರೆ. ಆ ಪಟ್ಟಿಯನ್ನು ಬೇಕಾದರೆ ನಾನು ತಮ್ಮ ಮುಂದೆ ಇಡುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್ :—ಅಂಥಾ ನಿದರ್ಶನಗಳು ಇದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ಈಗ ನನಗೆ ಬಂದಿರುವ ವರ್ತಮಾನದ ಪ್ರಕಾರ ಒಬ್ಬರಿಗೂ ಕೊಟ್ಟಿಲ್ಲ.